ಆಗಲಿಲ್ಲ. ದೊಡ್ಡದೊಂದು ಮಂಗ ಹಿಂಬದಿಯಿಂದ ತನ್ನ ಎರಡು ಕೈಗಳಿಂದ ನನ್ನ ಸೊಂಟದ ಭಾಗವನ್ನು, ಕಾಲುಗಳಿಂದ ನನ್ನ ಮೊಣಕಾಲಿನ ಭಾಗವನ್ನು ಘಟ್ಟಿಯಾಗಿ ಹಿಡಿದಪ್ಪಿಬಿಟ್ಟಿದೆ. ಹೆಣಭಾರವೆನಿಸಿದ್ದೊಂದೇ ಗೊತ್ತು... ಗೆಳತಿ ಚೀರಿಕೊಂಡು ಗ್ರಂಥಾಲಯದ ಒಳ ಓಡಿಹೋದದ್ದು ಗೊತ್ತಾಗುತ್ತಿದೆ. ನಾನು ಓಡುವ ಹಾಗಿಲ್ಲ. ಹೀಲ್ಡ್ ಚಪ್ಪಲಿಯಲ್ಲಿ ನಡೆದದ್ದೇ ಮೊದಲ ಸಲ. ಇನ್ನೂ ಬಿದ್ದೆನೆಂದರೆ, ಕಣ್ ಮುಚ್ಚಿಕೊಂಡು ಕಲ್ಲಿನ ಮೂರ್ತಿಯಂತೆ ನಿಂತಿದ್ದೇನೆ. ದೂರದಲ್ಲಿ ಹುಡುಗರು ಹುಡುಗಿಯರು ನನ್ನ ಕುರಿತು 'ಎ... ಅಲ್ ನೋಡ್ರಿ, ಮಂಗ್ಯಾ ಹಿಡಕೊಂಡೇತಿ... ಓಡಸ್ರಿ ಅದನ್.ಹುಚ್ ಮಂಗ್ಯಾ ಬಂದೇತಿ ಅಂದ್ರಲ್ಲಾ, ಅದ ನೋಡು ಇದು...' ಹಿಂಗ ಇನ್ನೂ ಏನೇನೋ ಹೇಳುವುದು ಕೇಳುತ್ತಿತ್ತು. ಆದರೆ, ನಾನು ಬೆವರುತ್ತಲೇ ಇದ್ದೆ. ದೊಡ್ಡದಾಗಿ ಧೈರ್ಯ ಮಾಡಿ ಸಣ್ಣದಾಗಿ ಕಣ್ ತೆರೆದು ನೋಡಿದೆ. ನನ್ನ ಎಡ ಸೊಂಟದ ಭಾಗಕ್ಕೆ ತಲೆ ಆನಿಸಿ ಆರಾಮಾಗಿ ಅವುಚಿಕೊಂಡಿದೆ ಆ ದೊಡ್ಡ ಮಂಗ. ದೇವರನ್ನು ಮನದಲ್ಲಿ ನೆನಯುತ್ತ ಕೈಯಲ್ಲಿ ಹಿಡಿದಿದ್ದ ಪುಸ್ತಕ ಹಾಗೂ ಪರ್ಸ್‌ನಿಂದ ಎಡ ಸೊಂಟದ ಭಾಗಕ್ಕೆ ಜೋರಾಗಿ ಹುಷಾ... ಹುಷಾ... ಎಂದು ಹೊಡೆದೆ. ನನ್ನ ಪುಣ್ಯ, ಮಂಗ ಜಿಗಿದು ದೂರಕ್ಕೆ ಓಡಿಹೋಯಿತು. ಜೀವದಾಗ ಜೀವಾ ಬಂದಂಗಾತು. ನಂತರ ಎಲ್ಲರೂ ಸೇರಿ ಸಮಾಧಾನಿಸಿದ್ದು ಬೇರೆ ಮಾತು. ಅದೆ ಮೊದಲು ಮತ್ತು ಅದೆ ಕೊನೆ, ನಾ ಹೀಲ್ಡ್ ಚಪ್ಪಲಿ ಮೆಟ್ಟಿದ್ದು. ಆದ್ರೆ, ನನಗೆ ಮಂಗಗಳ ಬಗೆಗಿದ್ದ ಭಯ ಆ ಕ್ಷಣದಿಂದ ದೂರವಾಯಿತು.

ಮೊನ್ನೆ ಮೊನ್ನೆ ಒಂದು ಕಾರ್ಯಕ್ರಮಕ್ಕೆ ನನ್ನೊಂದಿಗೆ ನನ್ನ ಮಗನೂ ಬಂದಿದ್ದ. ಹಂಗಾಗಿ, ಹೊರಭಾಗದಲ್ಲಿ ಚಪ್ಪಲಿ ಬಿಡುವಾಗ ನನ್ನನ್ನೆ ನೋಡಿ ಕೇಳಿದ 'ಯಾಕಮ್ಮಾ, ಒಂದ್ ಚಪ್ಪಲಿ ಇಲ್ಲೆ, ಮತ್ತೊಂದು ಚಪ್ಪಲಿ ಆ ಕಡೆ ದೂರದಲ್ಲಿ ಬಿಟ್ಟೆಲ್ಲಾ...' ಅದಕ್ಕುತ್ತರವಾಗಿ 'ಮಗಾ ಹಿಂಗ ಮಾಡೋದರಿಂದ ಚಪ್ಪಲಿ ಕಳುವಾಗೋದನ್ನು ತಪ್ಪಿಸಬೋದು' ಎಂದೆ. 'ಹೆಂಗಮ್ಮಾ? ಎಂದ. 'ಚಪ್ಪಲಿ ಕಳುವು ಮಾಡುವವರಿಗೆ ಹುಡುಕಾಡಲು ಕಷ್ಟವಾಗಲಿ ಎಂದು ದೂರದೂರದಲ್ಲಿ ಚಪ್ಪಲಿಗಳನ್ನು ಬಿಟ್ಟರೆ ಒಳ್ಳೇದು. ಅಲ್ಲದೇ ಕಳ್ಳತನ ಮಾಡೋರ ಮನದಾಗ ಭಯಾ ಇರತೈತೆಲ್ಲಾ ಹಂಗಾಗಿ, ಹುಡುಕಾಡಮುಂದ ಜಲ್ದಿ ಸಿಗದಿದ್ದರ ಹಾಕೊಳ್ಳದ ಬಿಟ್ ಹೊಕ್ಕಾರ'. ಅಂತ ತರ್ಕ ಹೇಳಿದ ಮೇಲೆ, ಮಗನಿಗೆ ಸಮಾಧಾನವಾಯಿತೆಂದು ಕಾಣುತ್ತದೆ.

ನಾನಂತೂ ಈ ಐಡ್ಯಾ ದಿನವೂ ಪಾಲಿಸುತ್ತಲೇ ಇರುತ್ತೇನೆ. ಯಾರಾದರೂ ಸಂಗಡಿಗರು, ಆತ್ಮೀಯರು ಕೇಳಿದ್ರೆ ಮೊದಲೆಲ್ಲಾ ಹೇಳಿಬಿಡತಿದ್ದೆ. ಆದರೀಗ ಮನದಲ್ಲಿ ಶಂಕೆ ಶುರುವಾಗಿದೆ. ಏನೆಂದರೆ, ಅವರು ಇದನ್ನು ಪಾಲಿಸುತ್ತಾರೋ ಇಲ್ಲವೋ ಅದು ಬೇರೆ, ಅದರ ಬದಲಿ ನನ್ನ ಚಪ್ಪಲಿಯ ಕಳ್ಳತನದಲ್ಲಿ ಇವರದೇ ಕೈವಾಡವಾದರೆ, ಹೀಗೊಂದು ಸಂಶಯದೆಳೆ ಶುರುವಾದದ್ದೇ ತಡ ಈಗೀಗ ಕೇಳಿದೋರಿಗೆ ಈ ಉಪಾಯ ಹೇಳೋದನ್ನೇ ಬಿಟ್ಟಿದೇನೆ. ಈಗ ಓದುಗರು ಸಹೃದಯರೆಂದು ಬಗೆದು ನನ್ನ ಐಡ್ಯಾ ಇಲ್ಲಿ ಬರೆದಿದ್ದೇನೆ.

ಹೀಗೆ ಚಪ್ಪಲಿ ನಿಭಾಯಿಸುವ ಜವಾಬ್ದಾರಿ ಒಂದೇ ಎರಡೇ. ಬಹುಶಃ ಮನುಷ್ಯನನ್ನು ಹಿಂದಿಕ್ಕಿ ಆಧುನಿಕತೆಯ ಕಡೆಗೆ ಓಡುತಿರುವ ಚಪ್ಪಲಿ ಒಂದು ಕಾಲದಲ್ಲಿ ಸಿಂಹಾಸನವನ್ನು ಅಲಂಕರಿಸಿ ಇಂದಿನವರು ನಾಚುವಂತೆ, ನ್ಯಾಯಯುತವಾಗಿ ಆಡಳಿತ ನಡೆಸಿದ್ದನ್ನು ನಾವಿಲ್ಲಿ ನೆನಪಿಸಿಕೊಳ್ಳಲೇಬೇಕು.

ಚಪ್ಪಲಿ ಶಬ್ದದ ಬದಲಿ 'ಪಾದುಕೆ' ಎಂಬ ಪದವೇನಾದರೂ ತಲೆಯಲ್ಲಿ ಬಂದರೆ, ರಾಮಾಯಣದ ಭರತ ಕಣ್ ಮುಂದೆ ಬರುತ್ತಾನೆ. ರಾಜ್ಯಭಾರದಲ್ಲಿ ರಾಮರಾಜ್ಯದಂತಹ ಮತ್ತೊಂದು ಉದಾಹರಣೆ ನಮ್ಮಲ್ಲಿಲ್ಲ. ಅಷ್ಟಲ್ಲದೇ ಇಡೀ ಇತಿಹಾಸದಲ್ಲೇ 'ಪಾದುಕೆ'ಯಿಂದ ರಾಜ್ಯಭಾರ ಮಾಡಿದ ರಾಜನೀತಿ ಎಲ್ಲೂ ಸಿಗುವುದಿಲ್ಲ. ಅದಕ್ಕೆ ಅಲ್ಲವೇ ಭರತ, 'ಪೂಜ್ಯ ಪಾದುಕೆಗಳಂ ಪೂಜ್ಯಪಾದಂ ಗೆತ್ತು ಸಿಂಹಾಸನದೊಳಿಟ್ಟು ಪೂಜಿಸುವೆನಾಂ' ಎಂದು ಪಾದುಕಾ ಪಟ್ಟಾಭಿಷೇಕದ ಮೂಲಕ ಭಾರತದಲ್ಲಿ ಮತ್ತೆಂದು ಸೃಷ್ಟಿಸಲಾಗದ ಇತಿಹಾಸವನ್ನು ಸೃಷ್ಟಿಸಿದ್ದು. ನಮಗೀಗಲೂ ಆ ತೆರನಾದ ಮತ್ತೊಂದು ಮಾದರಿಯನ್ನು ಸೃಷ್ಟಿ ಮಾಡಲು ಸಾಧ್ಯವಾಗದೇ ಹೋದರೇನಾಯಿತು, ಅನುಸರಣೆಯಂತೂ ಅಸಾಧ್ಯವಲ್ಲ ಅಲ್ಲವೆ. ●